ಇಂದು ದಿಃ **21-02-2025** ರಂದು ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ. ಸಿ. ವಕೀಲರಿಂದ ಪ್ರತಿವಾದಿ 4 ರಿಂದ 6 ರ ಪರಃ**

ನನ್ನ ತಂದೆಯ ಹೆಸರು ಕರಿಬಸಪ್ಪ. ನನ್ನ ತಾಯಿಯ ಹೆಸರು ಗೌರಮ್ಮ. ನನ್ನ ತಂದೆಗೆ ಇಬ್ಬರು ಹೆಂಡತಿಯರು. ನನ್ನ ತಂದೆಯ ಇನ್ನೊಬ್ಬ ಹೆಂಡತಿಯ ಹೆಸರು ಗಿರಿಜಮ್ಮ, ಆಕೆ 6 ನೇ ಪ್ರತಿವಾದಿ ಎಂದರೆ ಸರಿ. ನನ್ನ ತಾಯಿ ಗೌರಮ್ಮ ಇವಳಿಗೆ ನಾನು, ಗದಿಗೆಪ್ಪ ಹಾಗೂ ಪ್ರಮೀಳಮ್ಮ ಎಂಬ ಮಕ್ಕಳು. ಗದಿಗೆಪ್ಪ ಮತ್ತು ಪ್ರಮೀಳಮ್ಮ ತೀರಿಕೊಂಡಿದ್ದಾರೆ. 1 ನೇ ಪ್ರತಿವಾದಿ ಪ್ರಮೀಳಮ್ಮ ಇವಳ ಗಂಡ. 2 ಮತ್ತು 3 ನೇ ಪ್ರತಿವಾದಿಯರು ಪ್ರಮೀಳಮ್ಮನ ಮಕ್ಕಳು. 1 ನೇ ಪ್ರತಿವಾದಿ ನಮ್ಮ ಕುಟುಂಬದ ಸದಸ್ಯ ಅಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ದಾವಾ ಆಸ್ತಿಗಳಲ್ಲಿ ಯಾವುದೇ ಭಾಗ ಹೊಂದಿಲ್ಲ ಎಂದರೆ ಸರಿ. ಸಾಕ್ಷಿಗೆ ದಿನಾಂಕಃ21-08-2019 ರ ಒಂದು ಕ್ರಯಪತ್ರದ ದೃ.ನಕಲನ್ನು ತೋರಿಸಿ, ಸದರಿ ಕ್ರಯಪತ್ರದ ಪ್ರಕಾರ ದಿನಾಂಕಃ28-08-2019 ರಂದು ಸರ್ವೆ ನಂಬರ್ 39/4 ರಲ್ಲಿ 39 ಗುಂಟೆ ಜಮೀನನ್ನು ನಾನು, ನನ್ನ ತಂದೆ ಮತ್ತು ಉಳಿದವರು ಸೇರಿ ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಸದರಿ ಕ್ರಯಪತ್ರದಲ್ಲಿ ಇರುವ ತಮ್ಮ ಫೋಟೋ ಮತ್ತು ಸಹಿ ನೋಡಿ ಗುರುತಿಸಿದ್ದು, ಅದನ್ನು ನಿ.ಡಿ-1 ಎಂದು ಗುರುತಿಸಲಾಯಿತು. ದಿನಾಂಕಃ10-03-1995 ರಂದು ಪ್ರಮೀಳಮ್ಮ ಮತ್ತು 1 ನೇ ಪ್ರತಿವಾದಿ ನನ್ನ ತಂದೆಗೆ ಒಂದು ಹಕ್ಕು ಖುಲಾಸೆ ಪತ್ರ ಮಾಡಿ, ನನ್ನ ತಂದೆಯ ಆಸ್ತಿಗಳಲ್ಲಿ ತಮ್ಮ ಹಕ್ಕನ್ನು ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಪ್ರತಿವಾದಿ 4 ರಿಂದ 6 ರ ಪರ ವಕೀಲರು ಸಮಯಕೇಳಿದ್ದು, ನೀಡಲಾಯಿತು.**

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ಹರಿಹರ.